ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ



## ಹೃದಯದಿಂದ ಹೃದಯಕ್ಕೆ ಭಾವೇಶ್ ಸಾಮ್ರಾಜ್ಯ

ತಿಲಕ್ ಸ್ಮಾರಕ್ ಪ್ರದರ್ಶನಕ್ಕೆ 'ಭಾಟಿಯಾ ಪರಿವಾರ್' ಸಂಘಟನೆಯ ಅಧ್ಯಕ್ಷರಾದ ಕಿಶೋರ್ ಭಾಯಿ ಸಂಪತ್ ಅವರನ್ನೂ ಆಮಂತ್ರಿಸಲಾಗಿತ್ತು. ಅವರಲ್ಲಿ ಒಂದು ಗಾಜು ತಯಾರಿಸುವ ಕಾರ್ಖಾನೆ ಇತ್ತು. ಮೋಂಬತ್ತಿ ತಯಾರಿಸಲು ಬೇಕಿರುವ ವಿವಿಧ ಆಕಾರದ ಗಾಜಿನ ಲೋಟಗಳನ್ನು ಭಾವೇಶ್ ಇವರಿಂದಲೇ ಖರೀದಿಸಲು ಆರಂಭಿಸಿದ್ದರು. ಪ್ರದರ್ಶನಕ್ಕೆ ಅವರು ಗಾಜಿನ ಲೋಟಗಳನ್ನು ಸಾಲವಾಗಿ ಕೊಟ್ಟಿದ್ದರು. ಹಾಗೆಂದೇ ಅವರಿಗೆ ಭಾವೇಶ್ ಬಹಳಷ್ಟು ಹಣವನ್ನು ಹಿಂತಿರುಗಿಸಬೇಕಿತ್ತು. ಕಿಶೋರ್ ಭಾಯಿ ಅವರು ಮುಂಬಯಿಯಿಂದ ಪುಣೆಗೆ ಪ್ರದರ್ಶನವನ್ನು ಖುದ್ದಾಗಿ ನೋಡಲು ಬಂದಿದ್ದರು. ಅಲ್ಲಿ ಪ್ರದರ್ಶನಕ್ಕೆ ಜನರ ಪ್ರತಿಕ್ರಿಯೆಯನ್ನು ನೋಡಿ ಅವರಿಗೆ ಅಚ್ಚರಿ. ಕಿಶೋರ್ ಭಾಯಿ ಅವರಿಗೆ ಅನಿಸಿತ್ತು, ಎಲ್ಲೋ ಭಾವೇಶ್ ಮತ್ತು ಸಚಿನ್ ಭಾಯಿ ಸಂಬಂಧಿಕರಿರಬೇಕು. ಆದರೆ ಪ್ರದರ್ಶನದಲ್ಲಿ ಅವರಿಗೆ ಅರಿವಾಗಿತ್ತು, ಯಾವ ರಕ್ತ ಸಂಬಂಧವೂ ಇಲ್ಲದೆ, ಒಂದು ಸಣ್ಣ ಪರಿಚಯ ಸ್ನೇಹವಾಗಿ ಅರಳಿ, ಇಷ್ಟೊಂದು ಜನರನ್ನು ಒಂದು ಸೂತ್ರದಲ್ಲಿ ಬಂಧಿಸಿತ್ತು. ಕಿಶೋರ್ ಭಾಯಿ ಭಾವೇಶ್ ಅವರಿಂದ ಬೀಳ್ಕೊಡುವ ಮೊದಲು ಹೇಳಿದ್ದರು – 'ನನಗೆ ಕೆಡುಕೆನಿಸುತ್ತಿದೆ, ನಾವು ಒಂದೇ ಸಮಾಜದವರು ಆಗಿದ್ದರೂ, ನಿಮಗೆ ಯಾವ ಸಹಾಯವನ್ನೂ ಮಾಡುತ್ತಿಲ್ಲ. ಈ ಎಲ್ಲ ಜನರು ನಿಮ್ಮ ಸ್ನೇಹಿತರಷ್ಟೆ. ಆದರೆ ಅವರೆಲ್ಲ ತಮ್ಮ ಕೆಲಸ ಕಾರ್ಯ ಎಲ್ಲವನ್ನೂ ತೊರೆದು ನಿಮಗೆ ಸಹಾಯ ಮಾಡಲು ಹಗಲು ರಾತ್ರಿ ದುಡಿಯುತ್ತಿದ್ದಾರೆ. ಈಗ ನನ್ನ ಕಣ್ಣುಗಳೂ ತೆರೆದಿವೆ. ನಾವು ನಮ್ಮ ಸಮಾಜದ ಮೂಲಕ ನಿಮ್ಮ ಕೆಲಸಕ್ಕೆ ಸಹಕಾರ ನೀಡುತ್ತೇವೆ'.

ಪ್ರತಿವರ್ಷದ ಹಾಗೆ, ಆ ವರ್ಷವೂ ನವೆಂಬರ್ ತಿಂಗಳಲ್ಲಿ ಮುಂಬಯಿಯ ಬೊರಿವಲಿ ಇಲಾಖೆಯಲ್ಲಿ ಅಖಿಲ ಭಾರತ ಭಾಟಿಯಾ ಸಮಾಜದ 50ಕ್ಕೂ ಹೆಚ್ಚು ಸಾಮೂಹಿಕ ವಿವಾಹಗಳನ್ನು ಆಯೋಜಿಸಲಾಗಿತ್ತು. ಕಿಶೋರ್ ಭಾಯಿ ಆ ಭವ್ಯ ಪೆಂಡಾಲ್‌ನಲ್ಲಿ ಭಾವೇಶ್ ಅವರಿಗೆ ಒಂದು ದೊಡ್ಡ ಸ್ಟಾಲ್ ಹಾಕುವ ವಿಶೇಷ ವ್ಯವಸ್ಥೆಯನ್ನು ಮಾಡಿದರು. ಕಿಶೋರ್ ಭಾಯಿ ಅವರೊಡನೆ ಇದ್ದ ಅಲ್ಲಿಯ 'ಜನ್ಮಭೂಮಿ ಪ್ರವಾಸೀ' ಮತ್ತು 'ಮುಂಬಯಿ ಸಮಾಚಾರ್' ಹೆಸರಿನ ಪ್ರಸಿದ್ಧ ಗುಜರಾತೀ ಸಮಾಚಾರ ಪತ್ರಗಳ ಪತ್ರಕಾರರು ಉಪಸ್ಥಿತರಿದ್ದರು. ಈ ಎರಡೂ ಸಮಾಚಾರ ಪತ್ರಗಳು ಪೂರಾ ಮುಂಬಯಿಯ ಉದ್ಯಮ ಸಮುದಾಯವನ್ನು ತಲುಪುತ್ತಿದ್ದವು. ಅಲ್ಲಿ ಸ್ಟಾಲ್ ಹಾಕಿದುದರ ಲಾಭವಾಗಿ ಭಾವೇಶ್ ಬಹಳಷ್ಟು ಗುಜರಾತಿ ವ್ಯಾಪಾರಿಗಳೊಡನೆ ಸಂಪರ್ಕ ಪಡೆಯಲು ಸಾಧ್ಯವಾಯಿತು. ಬೋರೀವಲೀಯ ಆ ಸ್ಟಾಲ್‌ನಲ್ಲಿ ಅದೆಷ್ಟೋ ವರ್ಷಗಳ ನಂತರ ಭಾವೇಶ್ ಅವರಿಗೆ ದಿನುಭಾಯಿ ಗಾಂಧೀ ಅವರ ಭೇಟಿಯಾಗಿತ್ತು. ಆ ಸಮಯದಲ್ಲಿಯೂ ದಿನುಭಾಯಿ ಎನ್.ಎ.ಬಿ. ಇಂಡಿಯಾದಲ್ಲಿ ಗೌರವ ಕಾರ್ಯದರ್ಶಿಯಾಗಿದ್ದರು.

ಆ ದಿನಗಳಲ್ಲಿ ದಿನುಭಾಯಿ ಎನ್.ಎ.ಬಿ. ಹಾಗೂ ರಿಲಯನ್ಸ್ ಇಂಡಸ್ಟ್ರಿ ನಡುವೆ ಗಟ್ಟಿಯಾದ ಸಂಬಂಧವನ್ನು ಏರ್ಪಡಿಸಿದ್ದರು. ದಿನುಭಾಯಿ ಅವರ ಪ್ರಯತ್ನದಿಂದ ರಿಲಯನ್ಸ್ ಇಂಡಸ್ಟ್ರೀಸ್ ಪ್ರತಿ ವರ್ಷ ಎನ್.ಎ.ಬಿ. ಇಂಡಿಯಾಗೆ 5 ಕೋಟಿ ರೂಪಾಯಿಗಳ ದೇಣಿಗೆಯನ್ನು ನೀಡುತ್ತಿತ್ತು. ಎನ್.ಎ.ಬಿ. ಇಂಡಿಯಾದ ಅನೇಕ ಪುನರ್ವಸತಿ ಕೇಂದ್ರಗಳಲ್ಲಿ ಅಂಧರು ವಿವಿಧ ವಸ್ತುಗಳನ್ನು ತಯಾರಿಸುತ್ತಿದ್ದರು. ಅವನ್ನು ಬಹಳ ದೊಡ್ಡ ಸಂಖ್ಯೆಯಲ್ಲಿ ರಿಲಯನ್ಸ್‌ಗೆ ಮಾರಲಾಗುತ್ತಿತ್ತು. ಇಲ್ಲಿ ಬೊರಿವಲೀಯ ಸ್ಟಾಲ್‌ನಲ್ಲಿ ಮೊದಲ ಬಾರಿಗೆ ಭಾವೇಶ್ ಅವರು ತಯಾರಿಸಿದ ಮೋಂಬತ್ತಿಗಳನ್ನು ದಿನುಭಾಯಿ ನೋಡಿದರು. ಆಗಲೇ ಅವರಿಗೆ ಅನಿಸಿತು, ಈ ವಸ್ತುಗಳು ರಿಲಯನ್ಸ್‌ಗೆ ಇಷ್ಟವಾಗುತ್ತವೆ. ಆರಂಭಕ್ಕೆ 60 ರೂಪಾಯಿ ಬೆಲೆಯ 200 ಹೂವಿನ ಆಕಾರದ ಮೋಂಬತ್ತಿಗಳನ್ನು ಭಾವೇಶ್ ಅವರಿಂದ